

ಏಳುಕೊಳ್ಳದ ಬೆಟ್ಟವೊಂದರಲ್ಲಿ ದೂರದಿಂದ ಪುಟ್ಟಪುಟ್ಟ ಗುಡಿಸಲುಗಳಂತೆ ಕಾಣುತ್ತಿರುವ ಭಕ್ತರ ಬಂಡಿಗಳು



ಏರಿನ ರಸ್ತೆಯಲ್ಲಿ ಬಂಡಿಯಿಂದ ಕೆಳಗಿಳಿದು ಸಾಗುತ್ತಿರುವ ಯಾತ್ರಿಕರು



ಏಳುಕೊಳ್ಳದಲ್ಲಿ ಕಂಡ ಚಕ್ಕಡಿ ಹಿಂಡು

ಸಂಗ್ರಹಿಸಿಟ್ಟಿರುತ್ತಾರೆ. ಬಹಳ ದಿನಗಳ ಪ್ರಯಾಣ ಆಗಿರುವುದರಿಂದ ಬಂಡಿಗಳನ್ನು ಅನುಕೂಲಕ್ಕೆ ತಕ್ಕಂತೆ ಮಾರ್ಪಾಡು ಮಾಡಿಕೊಂಡಿರುತ್ತಾರೆ ಅವುಗಳ ಮಾಲೀಕರು.

ಗಮ್ಯ ತಲುಪಿದ ಮೇಲೆ ಯಲ್ಲಮ್ಮನ ಗುಡ್ಡದ ಆಯಕಟ್ಟಿನ ಪ್ರದೇಶಗಳಲ್ಲಿ ನಿಲ್ಲುವ ಈ ಭಕ್ತರ ಬಂಡಿಗಳು, ದೂರದಿಂದ ಪುಟ್ಟ ಪುಟ್ಟ ಗುಡಿಸಲುಗಳ ಸಾಲಿನಂತೆ ಭಾಸವಾಗುತ್ತವೆ. ಭಕ್ತರು ಸಮೀಪದ ಜೋಗುಳ ಬಾವಿಯಲ್ಲಿ ಮಿಂದು ದೇವಿಯ ದರ್ಶನಕ್ಕೆ ಹೋಗುತ್ತಾರೆ. ಅಲ್ಲಿಂದ ಪಡ್ಲಿಗಿ ತುಂಬಿಸುವುದು, ಎಡೆ ಹಿಡಿಯುವುದು, ಆಹಾರ ತಯಾರಿ ನಡೆಯುವುದು – ಎಲ್ಲವೂ ಈ ಬಂಡಿಗಳ ಕೆಳಗೆಯೇ. ಅವರು ಅಲ್ಲಿ ಎಷ್ಟು ದಿನ ತಂಗುವರೋ ಅಷ್ಟು ದಿನ ಬಂಡಿಯೇ ಅವರ ತಾತ್ಕಾಲಿಕ ಮನೆ. ಬಂಡಿ ಪ್ರಯಾಣದಿಂದ ಉಂಟಾದ ಭಕ್ತರ ಆಯಾಸ, ದೇವಿ ದರ್ಶನ ಕೈಗೊಂಡ ನಂತರ ಪರಿಹಾರವಾಗಿಬಿಡುತ್ತದೆ ಎಂಬುದನ್ನ ಅವರ ಮುಖಗಳೇ ಹೇಳುತ್ತವೆ. ಕೆಲ ಭಕ್ತರು ಪಾದಯಾತ್ರೆ ಮೂಲಕವೂ ಸವದತ್ತಿಗೆ ಆಗಮಿಸುವುದುಂಟು.

ಹೊರ ರಾಜ್ಯಗಳ ಭಕ್ತರು ಸವದತ್ತಿಗೆ ಕೇವಲ ಬಂಡಿಗಳೊಂದಿಗೆ ಬರುವುದಿಲ್ಲ. ಅವರು ತಮ್ಮ ಸಂಸ್ಕೃತಿ, ಆಚರಣೆ, ವೇಷಭೂಷಣ, ಆಹಾರ ಪದ್ಧತಿ ಎಲ್ಲವನ್ನೂ ಇಲ್ಲಿಗೆ ಹೊತ್ತುಕೊಂಡು ಬಂದಿರುತ್ತಾರೆ. ಅವುಗಳ ವಿನಿಮಯ ಕೂಡ ಇಲ್ಲಿ ನಡೆಯುತ್ತದೆ. ಹಾಗಾಗಿಯೇ ಏನೋ, ಉತ್ತರ ಕರ್ನಾಟಕದಲ್ಲಿ ಬಹುತ್ವ ತುಸು ಹೆಚ್ಚೇ ಇದೆ ಎನ್ನಬಹುದು. ಈ ಜಾತ್ರೆಯಲ್ಲಿ ಮರಾಠಿ ಭಾಷಿಕರು ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತಾರೆ. ಆಂಧ್ರ, ತೆಲಂಗಾಣ, ತಮಿಳುನಾಡು, ಗೋವಾ ರಾಜ್ಯಗಳ ಜನರೂ ಎದುರಾಗುತ್ತಾರೆ. ವ್ಯಾಪಾರಿಗಳಲ್ಲಿ ಲಂಬಾಣಿ ಸಮುದಾಯದವರು ಹೆಚ್ಚು.

ಸವದತ್ತಿ ಯಲ್ಲಮ್ಮನ ಜಾತ್ರೆ ಕೊರೊನಾ ಕಾರಣದಿಂದಾಗಿ ಕಳೆದ ಎರಡು ವರ್ಷಗಳಿಂದ ಪೂರ್ಣ ಪ್ರಮಾಣದಲ್ಲಿ ನಡೆದಿಲ್ಲ. ಧಾರ್ಮಿಕ ಕಾರ್ಯಕ್ರಮಗಳಿಗೆ ಮಾತ್ರ ಜಾತ್ರೆ ಸೀಮಿತಗೊಂಡಿತ್ತು. ಈ ಬಾರಿ, 2023ರ ಜನವರಿ 6ರ 'ಬನದ ಹುಣ್ಣಿಮೆ'ಯಿಂದ ಜಾತ್ರೆ ಆರಂಭವಾಗಲಿದೆ. ಭಂಡಾರದಲ್ಲಿ ಮಿಂದೇಳುವ ಸವದತ್ತಿಯನ್ನು, ಬಂಡಿ ಪ್ರಯಾಣದ ನೋಟಗಳನ್ನು ಮತ್ತೆ ಕಣ್ತುಂಬಿಕೊಳ್ಳುವ ಅವಕಾಶವನ್ನು ಜಾತ್ರೆ ಒದಗಿಸಲಿದೆ.

ಪ್ರತಿಕ್ರಿಯಿಸಿ: feedback@sudha.co.in